ಸಮಗ್ರ ಶಿಕ್ಷಣ–ಕರ್ನಾಟಕ

**ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು –560 001**

---

**ಸಂಖ್ಯೆ: ಸ.ಶಿ.ಕ/ಸಿ.ಶಾ/ರಾ.ಯೋ.ಅ/2022–23/ 50 ಕೋಟಿ** **ದಿನಾಂಕ:03.03.2023**

**ಜ್ಞಾಪನ**

ವಿಷಯ: 2022-23ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ/ಮಹತ್ವಾಕಾಂಕ್ಷಿ ತಾಲ್ಲೂಕುಗಳ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಕರ್ಯಗಳಿಗಾಗಿ ಹಂಚಿಕೆಯಾಗಿರುವ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಇಪಿ 86 ಯೋಯೋಕ 2021 ದಿನಾಂಕ 19.04.2022
2. ಸರ್ಕಾರದ ಆದೇಶ ಸಂಖ್ಯೆ ಇಪಿ 86 ಯೋಯೋಕ 2022 ದಿನಾಂಕ 29.06.2022
3 ಸರ್ಕಾರದ ಆದೇಶ ಸಂಖ್ಯೆ: ಪಿಡಿಎಸ್/49/ಎಸ್.ಡಿ.ಪಿ/2022, ದಿನಾಂಕ: 24.01.2023.
4 ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ (ಯೋಜನೆ) ಶಾಲಾ ಮತ್ತು ಸಾಕ್ಷರತಾ ಇಲಾಖೆ ರವರ ಪತ್ರ ಸಂಖ್ಯೆ: ಇಪಿ 256 ಯೋಸಕ 2022 ದಿನಾಂಕ: 06.02.2023
5 ಈ ಕಛೇರಿ ಜ್ಞಾಪನ **ಸಂಖ್ಯೆ:ಸ.ಶಿ.ಕ/ಸಿ.ಶಾ/ರಾ.ಯೋ.ಅ/2022–23/50 ಕೋಟಿ ದಿನಾಂಕ:06.02.2023**
6 ಸರ್ಕಾರದ ಆದೇಶ ಸಂಖ್ಯೆ ಇಪಿ 86 ಯೋಯೋಕ 2022 ದಿನಾಂಕ 20.02.2023

<u>ಪ್ರಸ್ತಾವನೆ:</u>

2022-23ನೇ ಸಾಲಿನ ಆಯವ್ಯಯದಲ್ಲಿ ಯೋಜನಾ ಇಲಾಖೆಗೆ ವಿಶೇಷ ಅಭಿವೃದ್ಧಿ ಯೋಜನೆಯಡಿ ರೂ.300070.00 ಲಕ್ಷಗಳ ಅನುದಾನ ನಿಗಧಿಪಡಿಸಲಾಗಿದ್ದು ಇದರಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಮೂಲಭೂತ ಸೌಕರ್ಯಗಳ ಲೆಕ್ಕಶೀರ್ಷಿಕೆ: 4202-01-201-1-06-133 ರಡಿ ರೂ.5000.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಿದೆ. ಈ ಅನುದಾನದಲ್ಲಿ 38 ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿ 40 ಕೆ.ಪಿ.ಎಸ್ ಶಾಲೆಗಳಿಗೆ ಮೂಲಭೂತ ಸೌಕರ್ಯಗಳಾದ, ಪೂರ್ವ ಪ್ರಾಥಮಿಕ ತರಗತಿ ಕೊಠಡಿಗಳು, ಪ್ರಾಥಮಿಕ ತರಗತಿ ಕೊಠಡಿಗಳು, ಪ್ರೌಢಶಾಲಾ ತರಗತಿ ಕಠಡಿಗಳು, ಗಣಕಯಂತ್ರ ಕೊಠಡಿ, ವಿಜ್ಞಾನ ಪ್ರಯೋಗಾಲಯ, ಗ್ರಂಥಾಲಯಾ, ಕಲೆ, ಕುಶಲ ಮತ್ತು ಸಾಂಸ್ಕೃತಿಕ ಕಲಾ ಕೊಠಡಿ, ಬಾಲಕ ಮತ್ತು ಬಾಲಕಿಯರಿಗೆ ಶೌಚಾಲಯ ಘಟಕ (ಪೂರ್ವ ಪ್ರಾಥಮಿಕ ವಿಭಾಗ), ಬಾಲಕ ಮತ್ತು ಬಾಲಕಿಯರಿಗೆ ಶೌಚಾಲಯ ಘಟಕ (ಪ್ರೌಢ ವಿಭಾಗ), ಕುಡಿಯುವ ನೀರಿನ ಘಟಕ, CWSN ಶೌಚಾಲಯಗಳ ಕಾಮಗಾರಿಗಳನ್ನು ನಿರ್ಮಾಣ ಮಾಡಲು ಕ್ರಿಯಾಯೋಜನೆಯ ಪ್ರಸ್ತಾವನೆಯನ್ನು ಸರ್ಕಾರದ ಆದೇಶ ಸಂಖ್ಯೆ ಪಿಡಿಎಸ್ 49 ಎಸ್‌ಡಿಪಿ 2022, ದಿನಾಂಕ:24.01.2023 ರನ್ವಯ ಸರ್ಕಾರ ಅನುಮೋದನೆ ನೀಡಿರುತ್ತದೆ.

ಉಲ್ಲೇಖಿತ ಪತ್ರ 5 -ರನ್ವಯ ಈ ಕಾರ್ಯಕ್ರಮದ ಅನುಷ್ಠಾಕ್ಕಾಗಿ 1ನೇ ಮತ್ತು 2ನೇ ತ್ರೈಮಾಸಿಕ ಕಂತಿನ ಒಟ್ಟಾರೆ ಅನುದಾನ ರೂ.25.00 ಕೋಟಿಗಳನ್ನು ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿದೆ.

ಉಲ್ಲೇಖಿತ 6 ರ ಸರ್ಕಾರದ ಆದೇಶದಲ್ಲಿ ಕಾರ್ಯಕ್ರಮದ ಅನುಷ್ಠಾಕ್ಕಾಗಿ ಉಳಿಕೆ ಅನುದಾನ ಒಟ್ಟಾರೆ ರೂ.25.00 ಕೋಟಿಗಳನ್ನು ಈ ಕಛೇರಿಗೆ ಬಿಡುಗಡೆ ಮಾಡಿರುತ್ತಾರೆ.

ಈ ಹಿನ್ನಲೆಯಲ್ಲಿ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶದಂತೆ 3ನೇ ಮತ್ತು 4ನೇ ತ್ರೈಮಾಸಿಕ ಕಂತಿನಲ್ಲಿ ಲೆಕ್ಕ ಶೀರ್ಷಿಕೆ: 4202-01-201-1-06-133 ರಡಿ ಬಿಡುಗಡೆಯಾಗಿರುವ ಉಳಿಕೆ ಒಟ್ಟು ಅನುದಾನ ರೂ. 2500.00 ಲಕ್ಷಗಳ ಮೊತ್ತವನ್ನು ರಾಜ್ಯದ ಉಪ ನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸ.ಶಿ.ಕ ಇವರುಗಳ **ಡಿಡಿಒ ಕೋಡ್ ಗಳಿಗೆ ಖಜಾನೆ -2 ತಂತ್ರಾಂಶದಲ್ಲಿ "ಯು" ಮೋಡ್ ಮೂಲಕ** ಬಿಡುಗಡೆ ಮಾಡಲಾಗಿದೆ. **(ಜಿಲ್ಲಾವಾರು ವಿವರ)**

| ಕ್ರ.ಸಂ | ಜಿಲ್ಲೆ | ಕೆ.ಪಿ.ಎಸ್ ಶಾಲೆಗಳ ಸಂಖ್ಯೆ | ಬಿಡುಗಡೆ ಮಾಡಿದ ಮೊದಲ ಕಂತಿನ ಅನುದಾನ ರೂ ಲಕ್ಷಗಳಲ್ಲಿ (50% ) | ಪ್ರಸ್ತುತ ಬಿಡುಗಡೆ ಮಾಡಲಾಗಿರುವ ಎರಡನೇ ಕಂತಿನ ಅನುದಾನ ರೂ ಲಕ್ಷಗಳಲ್ಲಿ (50%) | ಬಿಡುಗಡೆ ಮಾಡಿದ ಒಟ್ಟಾರೆ ಅನುದಾನ ರೂ ಲಕ್ಷಗಳಲ್ಲಿ |
|---|---|---|---|---|---|
| 1 | ಕಲ್ಬುರ್ಗಿ | 2 | 146.525 | 146.525 | 293.05 |
| 2 | ಕೊಪ್ಪಳ | 5 | 321.85 | 321.85 | 643.7 |
| 3 | ಗದಗ | 4 | 297.725 | 297.725 | 595.45 |
| 4 | ಚಿಕ್ಕಾಬಳ್ಳಾಪುರ | 1 | 52.425 | 52.425 | 104.85 |
| 5 | ಧಾರವಾಡ | 1 | 90.75 | 90.75 | 181.5 |
| 6 | ಬಳ್ಳಾರಿ | 5 | 273.375 | 273.375 | 546.75 |
| 7 | ಬಾಗಲಕೋಟೆ | 3 | 143.03 | 143.03 | 286.05 |
| 8 | ಬೀದರ್ | 2 | 122.625 | 122.625 | 245.25 |
| 9 | ಬೆಳಗಾವಿ | 2 | 55.3 | 55.3 | 110.6 |
| 10 | ಮೈಸೂರು | 1 | 90.75 | 90.75 | 181.5 |
| 11 | ರಾಯಚೂರು | 4 | 233.77 | 233.77 | 467.54 |
| 12 | ವಿಜಯಪುರ | 5 | 340.75 | 340.75 | 681.5 |
| 13 | ಶಿವಮೊಗ್ಗ | 1 | 84.325 | 84.325 | 168.65 |
| 14 | ಹಾವೇರಿ | 4 | 246.8 | 246.8 | 493.6 |
| | | **40** | **2500.00** | **2500.00** | **5000.00** |

ಷರತ್ತುಗಳು:

1. ಹಿಂದಿನ 2020-21 -2021-22ರ ಸಾಲಿನ ಕೆ.ಪಿ.ಎಸ್. ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಹಿನ್ನಲೆಯಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಪಾಲಿಸುವುದು.
2. ಸದರಿ ಕಾಮಗಾರಿಗಳನ್ನು ಆಯಾ ಜಿಲ್ಲೆಗಳಲ್ಲಿನ ಲೋಕೋಪಯೋಗಿ ಇಲಾಖೆ/ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸ್ಥಳೀಯ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ನಿಯಮಾನುಸಾರ ನಿರ್ವಹಿಸಲು ಅನುದಾನವನ್ನು ಶ್ರೀಘ್ರವಾಗಿ ಬಿಡುಗಡೆಮಾಡಿ ಅಯಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಇವರಿಂದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಪಡೆದು ನಿಯಮಾನುಸಾರ ಕ್ರಮವನ್ನು ಕೈಗೊಳ್ಳುವುದು.
3. ನಿವೇಶನವು ಶಾಲೆಯ ಹೆಸರಿನಲ್ಲಿರುವ ಕಡ್ಡಾಯವಾಗಿದ್ದು, ಶಾಲಾ ನಿವೇಶನಕ್ಕೆ ಸಂಬಂಧಿಸಿದಂತೆ ಯಾವುದಾರು ತಕರಾರುಗಳಿದ್ದಲ್ಲಿ ಅಂತಹ ಶಾಲಾ ಕಟ್ಟಡಕ್ಕೆ ಅನುದಾನ ಬಳಕೆಮಾಡುವ ಅವಕಾಶವಿರುವುದಿಲ್ಲ.
4. ನೆಲ ಅಂತಸ್ತಿನ ಈ ಕಟ್ಟಡವನ್ನು 8 ತಿಂಗಳ ಒಳಗೆ ಪೂರ್ಣಗಳಿಸುವುದು ಯಾವುದೇ ಹೆಚ್ಚುವರಿ ಕಾಲಾವಕಾಶಕ್ಕೆ ಅವಕಾಶವಿರುವುದಿಲ್ಲ.
5. ಒದಗಿಸಲಾದ ಅನುದಾನದ ಮಿತಿಯೊಳಗೆ ಹಾಗೂ ಯಾವುದೇ ಕಾರಣಕ್ಕೂ ಅನುದಾನ ವ್ಯಪಗತವಾಗದಂತೆ ಪ್ರಸಕ್ತ ಆರ್ಥಿಕ ಸಾಲಿನ ಅಂತ್ಯದೊಳಗೆ ಕಾಮಗಾರಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸುವುದು.
6. ಟೆಂಡರ್ ನಿಬಂಧನೆಗಳಲ್ಲಿರುವಂತೆ ಕಾಮಗಾರಿಯ ವಿನ್ಯಾಸದಲ್ಲಿ ಮತ್ತು ಅಂದಾಜಿನ ಅಂಶಗಳಲ್ಲಿ ಒಂದು ವೇಳೆ ಬದಲಾವಣೆಗಳಿದ್ದಲ್ಲಿ. ಸದರಿ ಬದಲಾವಣೆಯಿಂದ ಹೆಚ್ಚುವರಿ ಅರ್ಥಿಕ ಹೊರೆಯಾಗದಂತೆ ನೋಡಿಕೊಂಡು ಈ ಬಗ್ಗೆ ಸಮಗ್ರ ಶಿಕ್ಷಣ ಕರ್ನಾಟಕ ಗಮನಕ್ಕೆ ತಂದು, ಅನುಮೋದನೆ ಪಡೆದು, ಮುಂದುವರೆಯುವುದು.
7. ಪ್ರತಿ ಕಾಮಗಾರಿಗಳಿಗೆ ಬಳಸಲಾದ ಸಾಮಾಗ್ರಿಗಳ ಬಗ್ಗೆ ಹಾಗೂ ಕಾಮಗಾರಿಯ ಪ್ರಗತಿಯಲ್ಲಿ ಕಾಲಕಾಲಕ್ಕೆ ಅಗತ್ಯವಿರುವ ಎಲ್ಲಾ ಪರೀಕ್ಷೆಗಳನ್ನು ಕೈಗೊಳ್ಳುವುದು.
8. ಕಾಮಗಾರಿಗಳು ಪೂರ್ಣಗೊಂಡ ನಂತರ ನಿಗದಿಪಡಿಸಿರುವ ಅನುದಾನದ ಮಿತಿಯೊಳಗೆ ಶಾಲೆಗಳಿಂದ ಬೇಡಿಕೆಗಳನ್ನು ಪಡೆದು, ರಾಜ್ಯ ಕಛೇರಿಯಿಂದ ನೀಡುವ ನಿರ್ದಿಷ್ಠತೆಗಳಿಗನುಗುಣವಾಗಿ ಪ್ರಚಲಿತ ಎಲ್ಲಾ ಖರೀದಿ ನಿಯಮಗಳನ್ನು ಅನುಸರಿಸಿ ಪೀಠೋಪಕರಣಗಳನ್ನು ಖರೀದಿಸಿ ಶಾಲೆಗಳಿಗೆ ಸರಭರಾಜು ಮಾಡುವುದು.
9. ಸದರಿ ಕಾಮಗಾರಿಗಳ ಅನುಷ್ಠಾನದ ಬಗ್ಗೆ ಪ್ರತಿ ಮಾಹೆ ಪ್ರಗತಿಯ ವರದಿಯನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು.
10. ಬಿಡುಗಡೆ ಮಾಡಲಾದ ಅನುದಾನವನ್ನು ನಿಗದಿತ ಉದ್ದೇಶಕ್ಕೆ ನಿಯಮಾನುಸಾರ ಭರಿಸತಕ್ಕದ್ದು ಹಾಗೂ ಬಿಡುಗಡೆಯಾದ ಅನುದಾನಕ್ಕೆ ಸೂಕ್ತ ಲೆಕ್ಕ ಪತ್ರಗಳೊಂದಿಗೆ ಉಪಯೋಗಿತಾ ಪ್ರಮಾಣ ಪತ್ರವನ್ನು ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು ಇವರಿಗೆ ಸಲ್ಲಿಸುವುದು.
11. ಕಾಮಗಾರಿಯನ್ನು ಶೀರ್ಘವಾಗಿ ಅನುಷ್ಠಾನಗೊಳಿಸತಕ್ಕದ್ದು ಹಾಗೂ ಕಾಮಗಾರಿಯ 3 ಹಂತಗಳ (ಅಡಿಪಾಯ/ ಲಿಂಟಲ್/ಅಂತಿಮ) ಛಾಯಾಚಿತ್ರಗಳನ್ನು ಇಲಾಖೆಯ ಅಂತರ್ಜಾಲ ತಾಣದಲ್ಲಿ ಅಪ್ ಲೋಡ್ ಮಾಡತಕ್ಕದ್ದು.

12. ಕಾಮಗಾರಿಗೆ/ ಖರೀದಿಗೆ ಸಂಬಂಧಿಸಿದಂತೆ, ಪ್ರಚಲಿತ ಎಲ್ಲಾ ಕಾಮಗಾರಿ/ಖರೀದಿ ನಿಯಮಗಳನ್ನು ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ಅದರಡಿಯಲ್ಲಿ ಹೊರಡಿಸಲಾದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

13. ಅನುಮೋದನೆಯಾದ ಕಾಮಗಾರಿಗಳ ನೀಡಿರುವ ಅಂದಾಜು ಮಿತಿಯಲ್ಲಿಯೇ (ಟೆಂಡರ್ ಪ್ರೀಮಿಯಂ ಸೇರಿ ಅನುಷ್ಠಾನಗೊಳಿಸುವುದು.

14. ಕಾಮಗಾರಿಯ ಪ್ರಗತಿಯನ್ನಾಧರಿಸಿ ಉಳಿದ ಅನುದಾನ ಬಿಡುಗಡೆ ಮಾಡಲಾಗುವುದು.

15. ಈ ಕಾಮಗಾರಿಗಳ ಅಗತ್ಯತೆಯ ಬಗ್ಗೆ ಉಪ ನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಖಾತರಿ ಪಡಿಸಿಕೊಂಡು ಕಾಮಗಾರಿಯನ್ನು ಪ್ರಾರಂಭಿಸುವುದು ಹಾಗೂ ಧೃಢೀಕರಣದ ಜಿಲ್ಲಾವಾರು ಪ್ರತಿಯನ್ನು ಕಾಮಗಾರಿ ಪ್ರಾರಂಭಿಸುವ ಮುನ್ನ ಈ ಕಛೇರಿಗೆ ಸಲ್ಲಿಸುವುದು.

16. ಸರ್ಕಾರದ ಆದೇಶ ಸಂಖ್ಯೆ:ಇಪಿ127 ಯೋಯೋಕ 2021 ದಿನಾಂಕ:22.11.2022 ರಲ್ಲಿ ಸೂಚಿಸಿರುವಂತೆ ಕಾಮಗಾರಿಗಳಿಗೆ ಪಿ.ಡ್ಲೂ.ಡಿ/ ಪಿ.ಆರ್.ಇ.ಡಿ ಸಂಸ್ಥೆಗಳಿಗೆ ಕಾಮಗಾರಿಗಳ ಅನುಷ್ಠಾನಕ್ಕಾಗಿ ಬಿಡುಗಡೆಮಾಡಬೇಕಾದ ಅನುದಾನವನ್ನು ಖಜಾನೆಯ ಮೂಲಕ **Deposit of contribution works** ಅಡಿಯಲ್ಲಿ ಅಗತ್ಯವಿರುವ ಅನುದಾನವನ್ನು ವರ್ಗಾಯಿಸಲು ಅಗತ್ಯ ಕ್ರಮ ವಹಿಸುವುದು.

ಲಗತ್ತು:

ನಮೂನೆ-1 ಕಾಮಗಾರಿವಾರು ಬಿಡುಗಡೆ ಮಾಡಿರುವ ಅನುದಾನ ವಿವರ.

20.10.23

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

ಗೆ:

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ಇವರಿಗೆ ಅಗತ್ಯ ಕ್ರಮಕ್ಕಾಗಿ.
2. ಮುಖ್ಯ ಲೆಕ್ಕಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು, ಇವರಿಗೆ ಸದರಿ ಅನುದಾನವನ್ನು ಜಿಲ್ಲೆಗಳಿಗೆ ಖಜಾನೆ-2 ತಂತ್ರಾಂಶದ ಮೂಲಕ ಬಿಡುಗಡೆ ಮಾಡಲು ತಿಳಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹು ಮಹಡಿ ಕಟ್ಟಡ. ಬೆಂಗಳೂರು ರವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

3. ನಿರ್ದೇಶಕರು, ಪದವಿ ಪೂರ್ಣ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
4. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ.
5. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ ಮತ್ತು ಬೆಳಗಾವಿ ವಿಭಾಗ.
6. ಉಲ್ಲೇಖಿತ 1 ಮತ್ತು 2ರ ಸರ್ಕಾರದ ಆದೇಶದನ್ವಯ ಬಿಡುಗಡೆಯಾಗಿರುವ ಅನುದಾನವನ್ನು ಈ ಕಛೇರಿಯ ಡಿಡಿಒ ಕೋಡ್- 28316ಡಿ ಗೆ ಅಪ್ ಲೋಡ್ ಮಾಡಲು ಸಹನಿರ್ದೇಶಕರು (ಯೋಜನೆ) ಮಾನ್ಯ ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ಇವರಿಗೆ ಸೂಚಿಸಿದೆ.
7. ಜಿಲ್ಲಾ ಉಪ ನಿರ್ದೇಶಕರು ಆಡಳಿತ ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಲ್ಲಿಸುವ ಕೆ-2 ಬಿಲ್ಲುಗಳಿಗೆ ಮೇಲು ಸಹಿ ಮಾಡುವ ಅಧಿಕಾರವನ್ನು ಬೆಂಗಳೂರು ವಿಭಾಗ ವ್ಯಾಪ್ತಿಯ ಜಿಲ್ಲೆಗಳಿಗೆ ಮಾನ್ಯ ಅಯುಕ್ತರು ಪ್ರತ್ಯಾಯೋಜಿಸಿರುವಂತೆ ಸಹಾಯಕ ನಿರ್ದೇಶಕರು (ಎ.ಡಿ.ಪಿ.ಐ-3) ರವರಿಗೆ, ಮೈಸೂರು ಮತ್ತು ಬೆಳಗಾವಿ ವಿಭಾಗದ ಜಿಲ್ಲಿಯವರಿಗೆ ಆಯಾ ವ್ಯಾಪ್ತಿಯ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು ಇವರಿಗೆ ಹಾಗೂ ಕಲ್ಬುರ್ಗಿ ವಿಭಾಗದ ಜಿಲ್ಲೆಯವರಿಗೆ ಸಹ ನಿರ್ದೇಶಕರು (ಆಡಳಿತ) ಅಪರ ಆಯುಕ್ತರ ಕಛೇರಿ ಕಲ್ಬುರ್ಗಿ ಇವರಿಗೆ ನೀಡಲಾಗಿದೆ.
8. ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಮೈಸೂರು ಮತ್ತು ಬೆಳಗಾವಿ ವಿಭಾಗ ಸಾರ್ವಜನಿಕ ಶಿಕ್ಷಣ ಇಲಾಖೆ.
9. ಕಛೇರಿ ಪ್ರತಿ.